

ಡಾ.ವಿನೋದ ಛೆಬ್ಬಿ

**ಸಾವೂ ಬದುಕೂ ಒಟ್ಟೊಟ್ಟಿಗೆ ಸಾಗುತ್ತವೆ; ಅಷ್ಟೇ ಅಲ್ಲ, ನಾವು ಹಲವು ಬದುಕುಗಳನ್ನು ಒಟ್ಟಿಗೆ ಬದುಕುತ್ತಿರಬಹುದು!**

# 322: ಹೊಸ ದಾರಿ - 62

ಮರಣದೊಂದಿಗೆ ಮರಣಿಸುವುದರ ಬದಲು ಮರಣದಾಚೆ ಯೋಚಿಸುತ್ತಿದ್ದೇವೆ. ಮಾನವರ ಬೌದ್ಧಿಕ ಹಾಗೂ ಆಧ್ಯಾತ್ಮಿಕ ವಿಕಾಸವು ಎಷ್ಟರ ಮಟ್ಟಿಗೆ ಆಗಿದೆ ಎಂದರೆ ನಮ್ಮ ಬದುಕು ಈ ಶರೀರಕ್ಕೆ ಮಾತ್ರ ಸೀಮಿತವಾದುದಲ್ಲ ಎಂದು ಹೋದಸಲ ಹೇಳುತ್ತಿದ್ದೆ. ಇದನ್ನೇ ಇನ್ನಷ್ಟು ವಿಸ್ತರಿಸೋಣ.

ಪುನರಾವರ್ತನೆಯು ವಿಶ್ವನಿಯಮ: ಭೌತ/ಗಣಿತ ಶಾಸ್ತ್ರದ ಕ್ವಾಂಟಮ್ ಸಿದ್ಧಾಂತದ ಪ್ರಕಾರ ವಿಶ್ವದ ಎಲ್ಲ ಕಣಗಳನ್ನು ಸಾಧ್ಯವಾದ ಎಲ್ಲ ಕ್ರಮಗಳಲ್ಲಿ ಜೋಡಿಸುತ್ತ ಹೋದರೆ (permutation and combination) ಒಂದು ಹಂತದಲ್ಲಿ ಎಲ್ಲ ಸಾಧ್ಯತೆಗಳೂ ಕೊನೆಗೊಂಡು ನಂತರ ಪುನರಾವರ್ತನೆ ಅನಿವಾರ್ಯ ಆಗುತ್ತದೆ – ದಿನಾಲೂ ಒಂದೊಂದು ಹೊಸ ತಿಂಡಿ ಮಾಡಿದರೂ ಮತ್ತೆ ಮುಂಚಿನ ತಿಂಡಿಗಳಿಗೇ ಮರಳಿ ಬರುವಂತೆ. ಹಾಗಾಗಿ ಪುನರಾವರ್ತನೆ ವಿಶ್ವದ ಎಲ್ಲೆಡೆಯೂ ಕಂಡುಬರಲೇಬೇಕು; ಹಾಗೆಯೇ, ಹೀಗಾಗಿರುವ ಸಾಧ್ಯತೆಗಿಂತ ಮುಂಚಿನ, ಹಾಗೂ ಹೀಗಾದ ನಂತರದ ಸಾಧ್ಯತೆಯೂ ಇರಲೇಬೇಕು. (ಉದಾ. ನಿಮ್ಮ ಮನೆಯಲ್ಲಿ ಬಟಾಣಿ ಉಪ್ಪಿಟ್ಟು ಬಡಿಸಿಕೊಳ್ಳುತ್ತಿದ್ದರೆ ಬಹುದೂರದ ಇನ್ನೊಂದು ಮನೆಯಲ್ಲಿ ಉಪ್ಪಿಟ್ಟು ತಿಂದು ಮುಗಿಸಿದ್ದಾರೆ, ಹಾಗೂ ಮತ್ತೊಂದು ಕಡೆ ತರಕಾರಿ ಹಾಕಿ ಉಪ್ಪಿಟ್ಟು ಮಾಡುತ್ತಿದ್ದಾರೆ).

ಅಂದರೆ, ಈ ವಿಶ್ವದಲ್ಲಿ ಈ ರೂಪ ಧರಿಸಿ ಹೀಗೆ ಬದುಕಿರುವಿರಾದರೆ, ಇನ್ನೊಂದು ವಿಶ್ವದಲ್ಲಿ ನಿಮ್ಮ ತದ್ರೂಪಿ ಇದ್ದು ಈ ಬದುಕನ್ನೇ ಸ್ವಲ್ಪ ಬದಲಾವಣೆಯೊಂದಿಗೆ ಬದುಕುತ್ತ ಇದ್ದಾರೆ/ಇದ್ದೀರಿ. ಹಾಗೆಯೇ, ಇಲ್ಲಿ ಪ್ರೀತಿಸಿದವರನ್ನು ಕಳೆದುಕೊಂಡಿದ್ದರೆ, ಅಲ್ಲಿ ಅವರನ್ನು ಹೊಂದಿ ಸುಖವಾಗಿದ್ದೀರಿ. ಇಲ್ಲಿ ಅಪೂರ್ಣಗೊಂಡ ಬದುಕನ್ನು ಅಲ್ಲಿ ಪೂರ್ತಿಗೊಳಿಸುತ್ತಿದ್ದೀರಿ. ಇನ್ನೊಂದು ವಿಶೇಷವೆಂದರೆ, ಇಲ್ಲೆಲ್ಲ ಕಾಲವೆನ್ನುವುದು ಉದ್ದಕ್ಕೂ – ಅಂದರೆ, ಒಂದಾದ ನಂತರ ಇನ್ನೊಂದು (linear) – ಎಂದಿರದೆ ಕಾಲಾತೀತವಾಗಿವೆ. ಅಂದರೆ, ನಾವು ನೀವೆಲ್ಲ ಅಪರಿಮಿತ ವಿಶ್ವಗಳಲ್ಲಿ ಏಕಕಾಲಕ್ಕೆ ಬಹುರೂಪಿಯಾಗಿ ಬದುಕುತ್ತಿದ್ದೇವೆ. ಒಂದು ವಿಶ್ವದಲ್ಲಿ ಭಿನ್ನ ಲಿಂಗಿಯರಾಗಿದ್ದರೆ, ಇನ್ನೊಂದರಲ್ಲಿ ಪ್ರಾಣಿಯಾಗಿರಬಹುದು; ಮತ್ತೊಂದರಲ್ಲಿ ಅಹಮಿಕೆ ಇಲ್ಲದೆ ಅಸ್ತಿತ್ವ ಮಾತ್ರ ಆಗಿರಬಹುದು; ಅಥವಾ ಕೇವಲ ಚೇತನವಾಗಿರಬಹುದು; ನಿಮ್ಮಿಂದ ಹೊರಟ ಕಿರಣಗಳು ನಿಮಗೇ ಮರಳಿ, ನೀವು ನಿಮ್ಮ ಸೂರ್ಯನೂ ಆಗಿರಬಹುದು! ಅಂದಹಾಗೆ, ಇಷ್ಟೆಲ್ಲ ನಡೆಯಬೇಕಾದರೆ ಇಂಥ ವಿಶ್ವಗಳು ಎಷ್ಟಿರಬಹುದು? ವಿಜ್ಞಾನಿಯೊಬ್ಬರು ವಿವರಿಸುತ್ತಾರೆ: 'ಕೊನೆಮೊದಲಿಲ್ಲದ ಸಮುದ್ರ ತೀರವನ್ನು ಕಲ್ಪಿಸಿಕೊಳ್ಳಿ; ಅದರಲ್ಲಿ ನಮ್ಮ ವಿಶ್ವವು (ಅಂದರೆ, ಸೂರ್ಯಮಂಡಲ, ಆಕಾಶಗಂಗೆ, ನೀಹಾರಿಕೆಗಳು, ಕಪ್ಪುಗುಳಿಗಳು, ಸಮಸ್ತ ನಕ್ಷತ್ರಪುಂಜಗಳು, ಎಲ್ಲ ಸೇರಿ) ಒಂದು ಮರಳಿನ ಕಣವಷ್ಟೆ!' ಅದಕ್ಕಾಗಿ ವಿಶ್ವದ (universe) ಬದಲು ಸಮಾನ ವಿಶ್ವ (parallel universe), ಹಾಗೂ ಬಹುವಿಶ್ವ (multiverse) ಎನ್ನುವ ಪದಗಳು ಬಳಕೆಯಾಗುತ್ತಿವೆ.

ಇಷ್ಟೆಲ್ಲ ಯಾಕೆ ವಿವರಿಸುತ್ತಿದ್ದೇನೆ ಎಂದರೆ, ಇಷ್ಟೊಂದು ಆಯಾಮಗಳಲ್ಲಿ ನಾನಾ ರೂಪಗಳಲ್ಲಿ ಏಕಕಾಲಕ್ಕೆ ಬದುಕುತ್ತಿರುವ ನಮಗೆ ಈ ಒಂದು ಜೀವ ಲೆಕ್ಕವೆ? ಛೆ, ಇದೆಲ್ಲ ಕಲ್ಪನೆ ಮಾತ್ರ ಎಂದು ಮುಖ ಸೊಟ್ಟಗೆ ಮಾಡುತ್ತೀರಾ? ಪ್ರಶ್ನೆ ಕಲ್ಪನೆಯೋ ತರ್ಕಬದ್ಧವಾದುದೋ ಅಲ್ಲ; ಭವ್ಯವಾದುದನ್ನು ಕಲ್ಪಿಸಿಕೊಂಡು ನೆಮ್ಮದಿಯಿಂದ ಬದುಕುವುದು ಅಸಾಧ್ಯವಾದರೆ ಇಲ್ಲದಿರುವ ಸಾವನ್ನು ಕಲ್ಪಿಸಿಕೊಂಡು (ನೆನಪಿಸಿಕೊಳ್ಳಿ: ಸಾವು ಎಂದರೆ ಏನೂ ಇಲ್ಲ!) ಯಾಕೆ ಒದ್ದಾಡುತ್ತೀರಿ? ಇರುವಂತೆ ನೆಮ್ಮದಿಯಿಂದ ಇರಬಾರದೆ?

ಕಲ್ಪನೆಯಿಂದ ವಾಸ್ತವಕ್ಕೆ ಮರಳೋಣ. ಎಲ್ಲ ಕಡೆ ಕೋವಿಡ್ ಸಾವಿನ ನೆರಳಿರುವಾಗ ಬದುಕುವುದು ಹೇಗೆ? ಅವರಿವರದನ್ನು ಬಿಟ್ಟು ನನ್ನದೇ ದೃಷ್ಟಾಂತ ಮುಂದಿಡುತ್ತಿದ್ದೇನೆ. ಇತ್ತೀಚೆಗೆ ನನ್ನ ವಯಸ್ಸಿನ ಇಬ್ಬರು ಸಂಬಂಧಿಕರು ವಾರದೊಳಗೆ ತೀರಿಕೊಂಡರು. ಸ್ನೇಹಿತ ವಾಸ್ತುಶಿಲ್ಪಿ ಪ್ರೇಮಕುಮಾರ್ ಹೊರಟುಹೋದ. ನನ್ನ ಮೂವತ್ತೈದರ ಮಗಳು ಸಂದೇಶ ಕಳಿಸಿದಳು: 'ಅಪ್ಪಾ, ನಿನ್ನ ವಯಸ್ಸಿನವರು ನಿನ್ನ ಕಣ್ಣೆದುರು ಸಾಯುತ್ತಿದ್ದರೆ ಭಯಾನಕ, ಅಸುರಕ್ಷಿತ ಅನ್ನಿಸುವುದಿಲ್ಲವೆ?' ಅದಕ್ಕೆ ನನ್ನ ಪ್ರತಿಕ್ರಿಯೆ ಸುಮಾರು ಹೀಗಿದೆ:

'ಮಗೂ, ಚಿಕ್ಕವಳಾದ ನೀನು ಅಸ್ತಿತ್ವದ ಪ್ರಶ್ನೆಯನ್ನು ಬಿಚ್ಚುಮನಸ್ಸಿನಿಂದ ಕೇಳುವುದು ಸಂತೋಷವಾಗುತ್ತಿದೆ. ನನಗೆ ತಿಳಿದಂತೆ ಉತ್ತರಿಸುತ್ತೇನೆ:'

ಒಂದು: ಸಮವಯಸ್ಕರ ಸಾವಿನಿಂದ ಖಂಡಿತವಾಗಿಯೂ ದುಃಖವೆನಿಸುತ್ತದೆ – ಆದರೆ ಅವರು ಸತ್ತಿದ್ದರ ಬಗೆಗಲ್ಲ; ಬದುಕಿದ್ದಾಗ ಯಾವ ರೀತಿ ಬಾಳಿದ್ದರು ಎನ್ನುವುದರ ಬಗೆಗೆ. ಯಾರೋ ಹೇಳಿದ ಮಾತೊಂದು ನೆನಪಿಗೆ ಬರುತ್ತಿದೆ: ಬದುಕಿನ ಕೊನೆಯ ದಿನ ಹೇಗಿರುತ್ತದೆ? ನಾವಿಷ್ಟು ಕಾಲ ಏನಾಗಿದ್ದೆವೋ ಆ ವ್ಯಕ್ತಿಯು ಏನೇನಾಗಲು ಸಾಧ್ಯವಿತ್ತೋ ಆ ವ್ಯಕ್ತಿಗೆ ಮುಖಾಮುಖಿಯಾಗುವ ಸಮಯವಿದು. ಸರಿಯಾಗಿ ಬಾಳದಿರುವ ಮನವರಿಕೆ ಮುಖಕ್ಕೆ ರಾಚಿದಾಗ, ಬದುಕೆಲ್ಲ ವ್ಯರ್ಥವೆನಿಸಿ ಅಸಹನೀಯ ವ್ಯಥೆಯಾಗುತ್ತದೆ– ನರಕ ಎಂದರೆ ಇದೇ ಇರಬಹುದು. (ಇಲ್ಲೊಂದು ಬುದ್ಧವಾಣಿ: ಸಾಯುವಾಗ ಇರುವ ಭಾವದೊಂದಿಗೆ ಮುಂದೆ ಹುಟ್ಟುತ್ತೇವೆ.) ನನಗನಿಸುವ ಮಟ್ಟಿಗೆ ನಾನು ಸಾರ್ಥಕ ಬದುಕು ಬದುಕುತ್ತಿದ್ದೇನೆ. ಇನ್ನೊಂದು ಅವಕಾಶ ಸಿಕ್ಕರೆ ಇದೇ ಬದುಕನ್ನೇ ಆರಿಸಿಕೊಂಡು ಇಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುತ್ತೇನೆ.

ಎರಡು: ಎಲ್ಲರ ಬದುಕಿನ ದಾರಿಗಳೂ ಪ್ರತ್ಯೇಕವಾಗಿವೆ. ಇವು ಒತ್ತಟ್ಟಿಗೆ ಸಂಧಿಸುವಾಗ ಸಂಬಂಧವಾಯಿತು ಎಂದುಕೊಳ್ಳುತ್ತೇವೆ. ಇದು ಹೇಗೆಂದರೆ, ರೈಲು ಹತ್ತಿದಾಗ ಸಹಪ್ರಯಾಣಿಕರ ಜೊತೆಗೆ ಸಂಬಂಧ ಬೆಳೆಸುತ್ತೇವೆ; ನಮ್ಮ ನಿಲ್ದಾಣ ಬಂದಾಗ ಕೈಬೀಸಿ ಕೆಳಗಿಳಿಯುತ್ತೇವೆ. ಕೆಂಪುದೀಪದಲ್ಲಿ ವಾಹನ ನಿಲ್ಲಿಸಿದಾಗ ಪಕ್ಕದವರೊಡನೆ ನಸುನಗುತ್ತೇವೆ; ದೀಪ ಹಸಿರಾದಾಗ ನಮ್ಮ ನಮ್ಮ ಹಾದಿ ಹಿಡಿದು ಪ್ರತ್ಯೇಕವಾಗುತ್ತೇವೆ. ಇಲ್ಲಿ ಯಾರು ಯಾರನ್ನು ಅಗಲಿದರು ಎನ್ನುವುದು ಅವರವರ ದೃಷ್ಟಿಕೋನವಷ್ಟೆ.

ಮೂರು: ಸಾವು ಬದುಕಿನಿಂದ ಪ್ರತ್ಯೇಕಗೊಂಡದ್ದು ಎಂದು ನಾನು ಭಾವಿಸುವುದಿಲ್ಲ. ಹುಟ್ಟಿನಿಂದಲೇ ಸಾವಿನ ಕ್ಷಣಗಣನೆ ಶುರುವಾಗುತ್ತದೆ. ಸಾವೂ ಬದುಕೂ ಒಟ್ಟೊಟ್ಟಿಗೆ ಸಾಗುತ್ತವೆ ಎಂದೆನಿಸುತ್ತದೆ. ಪ್ರತಿ ಬೆಳವಣಿಗೆಯ ಹಂತದಲ್ಲೂ ನಮ್ಮಲ್ಲೊಂದು ಭಾಗ ಸಾಯುತ್ತ ಇರುತ್ತದೆ. ಉದಾಹರಣೆಗೆ, ಹದಿನಾಲ್ಕನೇ ವರ್ಷದವನಿರುವಾಗ ಕುತೂಹಲದ ವಿನೋದ ಸತ್ತು ಪ್ರತಿಭಟನೆಯ ವಿನೋದ ಹುಟ್ಟಿದ. ಹೀಗೆ, ವೈದ್ಯಪರೀಕ್ಷೆಯಲ್ಲಿ ಅಹಂಕಾರದವ ಸೋತು ಸತ್ತು ವಿನಯಶೀಲ ಹುಟ್ಟಿದ; ಪ್ರಿಯಪತ್ನಿಯ ಸಾವಿನೊಡನೆ ಅರ್ಧ ಸತ್ತು ಮರುಮದುವೆಯೊಡನೆ ಮರುಹುಟ್ಟಿದ; ವೈದ್ಯ ಸತ್ತು ಮನೋಚಿಕಿತ್ಸಕ ಹುಟ್ಟಿದ. ಈಗ ಕೋವಿಡ್ ಕಾರಣದಿಂದ ಜನಸಂಪರ್ಕ ಪ್ರಿಯ ವಿನೋದ ಸತ್ತು, ಗುಹೆಸೇರಿ ಆತ್ಮವಿಶ್ಲೇಷಣೆಗೆ ತೊಡಗುವ ವಿನೋದ ಹುಟ್ಟಿದ್ದಾನೆ. ಹೀಗೆ ಹುಟ್ಟುಸಾವುಗಳು ಎಡಬಲ ಹೆಜ್ಜೆಯಿಡುವಾಗ ಯಾವ ಕಾರಣಕ್ಕಾಗಿ ಅಭದ್ರತೆ, ಭಯಂಕರ ಅನ್ನಿಸಬೇಕು?

ಕೊನೆಯದಾಗಿ, ಕ್ರೂರ ಕೊರೊನಾದಲ್ಲೂ ಕರುಣೆಯಿದೆ. ಬದುಕಿನ ಕ್ಷಣಭಂಗುರತೆಯನ್ನು ಎದುರಿಸುವ ಭಾವುಕತೆಯಲ್ಲಿ ಜಗತ್ತೇ ಒಂದಾಗುತ್ತಿದೆ. ಒಂದುವೇಳೆ ಕೊರೊನಾ ರಕ್ತದ ಕ್ಯಾನ್ಸರ್‌ನಂತೆ ಒಬ್ಬರಿಗೆ ಮಾತ್ರ, ಆನುವಂಶಿಕ ರೋಗದಂತೆ ನಮ್ಮ ಕುಟುಂಬಕ್ಕೆ ಮಾತ್ರ, ನೆರೆಹಾವಳಿಯಂತೆ ನಮ್ಮ ಪ್ರದೇಶಕ್ಕೆ ಮಾತ್ರ, ಅಥವಾ ದಾರಿದ್ರ್ಯದಂತೆ ದೇಶಕ್ಕೆ ಮಾತ್ರ ಬಂದಿದ್ದು, ಉಳಿದಂತೆ ಜಗತ್ತು ತನ್ನಷ್ಟಕ್ಕೆ ತಾನು ಸಾಗುತ್ತಿದ್ದರೆ ನಮ್ಮ ಪಾಡು ಹೇಗಿರುತ್ತಿತ್ತು?

ಈಗ, ಬದುಕುಸಾವಿನ ಬಗೆಗೆ ನಿಮ್ಮ ಅನಿಸಿಕೆಅನುಭವಗಳೇನು? ತಿಳಿಸಿ.

ಸಂಪರ್ಕಕ್ಕೆ: 8494933888;
Email: vinod.chebbi@gmail.com